ಒಬ್ಬ ಇತರ ಮನುಷ್ಯನ ಸಂಗಡ ಬರುವ ಒಬ್ಬ ವಕೀಲನ ಮೂಲಕವಾಗಲಿ, ಸದರೀ ವಾದೀಗೆ ಜವಾಬ್ ಹೇಳಲಿಕ್ಕೆ ಈ ಕೋರ್ಟಿನಲ್ಲಿ ಸ್ಯ 1887ನೇ ಇಸವಿ ಮಾರ್ಚೀ 28ನೇ ಮಂಗಳವಾರ ಬೆಳಿಗ್ಯೆ 11 ಘಂಟೆಗೆ ಹಾಜರಾಗುವಂತೆ ಇದರ ದೆಸೆಯಿಂದ ನೀವು ಸಮ್ಮರ್ ಮಾಡಲ್ಪಟ್ಟಿರುವದಲ್ಲದೆ ಮೇಲೆ ನಮೂದಿಸಲ್ಪಟ್ಟ ದಿನದಲ್ಲಿ ನೀವು ಹಾಜರಾಗದೆ ಹೋದರೆ ನಿಮ್ಮ ಗೈರ್ ಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ಇಷ್ಯೂ ಮಾಡಲ್ಪಡುವದು.

ಸ್ಯ 1887ನೇ ಇಸವಿ ಮಾರ್ಚೀ ಮಾಹೆ 8ನೇ ಮಂಗಳವಾರದಲ್ಲಿ ನಮ್ಮ ದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಿ. ಸುಬ್ಬರಾವ್,
ಮುನಸಿಫ್.

ಫಾರೆಸ್ಟ್ ಇಲಾಖೆ.

ತಾರೀಖು 27ನೇ ಫಿಬ್ರವರೀ 1887.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಗವರ್ನಮೆಂಟ್ ಫಾರೆಸ್ಟುಗಳಿಂದಲೂ ಹಿಡುವಳೀ ಜಮೀನುಗಳಿಂದಲೂ, 1887—88ನೇ ಮುಂದಿನ ಸರ್ಕಾರ್ ಸಾಲಿನಲ್ಲಿ ಇದರಡೀಕಂಡ ತೇದಾದುನ್ನಿಳ್ಳ ವಣಗಿದ ಗಂಧದಮರಗಳು ಮತ್ತು ಹಳೆ ಗಂಧದ ಮರದ ಬೇರುಗಳನ್ನು ಕ್ರಮವಾಗಿ ಚೆಕ್ಕಿ ತಯಾರ್ಮಾಡಿ ಅಂದರೆ ಮೇಲ್ಗಡೆ ಸ್ವಲ್ಪ ಬಿಳಿಮರ ಸಹಿತವಾಗಿ ಕಂಟ್ರಾಕ್ಟು ಮೂಲಕ ಜವಾಯಿಸಿ ಹಾಸನದ ಸಂದಲ್ ಕೋಠಿಯಲ್ಲಿ ಒಪ್ಪಿಸುವ ಬಗ್ಯೆ ಇದರ ದೆಕೇಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.

		ಟನ್‌ಗಳು.
1.	ಹಾಸನ ತಾಲ್ಲೂಕು ಗ್ರಾಮದ ಸಬ್ ತಾಲ್ಲೂಕು ದೇಖೀಲ್	40
2.	ಅರಕೇಕೆರೆ ತಾಲ್ಲೂಕು	30
3.	ಚನ್ನರಾಯಪಟ್ಟಣದ ತಾಲ್ಲೂಕು	10
4.	ಹೊಳೇನರಸೀಪುರ ಡಿಟೋ	10
5.	ಅರಕಲ್‌ಗೂಡು ಡಿಟೋ	40
6.	ಮಂಜರಾಬಾದ್ ಡಿಟೋ	60
7.	ಬೇಲೂರು ಡಿಟೋ	60
	ಜುಮ್ಲಾ	250

2. ದರಖಾಸ್ತುಗಳು "ಹಾಸನದ ಕೋಠೀಗೆ ವಣಗಿದ ಗಂಧದ ಮರಗಳನ್ನೂ ಹಳೇ ಗಂಧದಮರದ ಬೇರುಗಳನ್ನೂ ಸರಬರಾಯಿ ಮಾಡುವ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ಸರಬರಾಯಿ ಮಾಡುವ ಬಗ್ಯೆ ವಪ್ಪಿಕೊಳ್ಳುವ ತೇದಾದಿನ ಮೇಲೆ ದರ ಟನ್ ವಂದಕ್ಕೆ ನಾಲ್ಕು ರೂಪಾಯಿ ಮೇರೆ ಆಗುವ ಮೊಬಲಗನ್ನ ನಗದಾಗಿಯಾಗಲೀ ಕರ್ಕೆಸಿ ನೋಟಿನ ಮೂಲಕವಾಗಿಯಾಗಲೀ ದರಖಾಸ್ತಿನೊಡನೆ ಕಳುಹಿಲ್ಪಟ್ಟ ಹೊರ್ತು ಅನ್ಯಥಾ ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

4. ಪ್ರತಿದರಖಾಸ್ತಿನಲ್ಲಿಯೂ, ದರಖಾಸ್ತುದಾರನು ವಣಗಿದ ಮರಗಳಿಗೂ ಮತ್ತು ಹಳೇ ಬೇರುಗಳಿಗೂ ಅವುಗಳು ತಯಾರ್ಮಾಡಿ ವಿಂಗಡಿಸಲ್ಪಟ್ಟ ತರುವಾಯ ಕೋಠೀಯಲ್ಲಿ ತೂಕಮಾಡಲ್ಪಟ್ಟು ದಾಸ್ತ್ ಮಾಡಲ್ಪಟ್ಟ ತೇದಾದಿಗೆ ದರ ಟನ್ ವಂದಕ್ಕೆ ಖಾಯಿಷ್ ಮಾಡುವ ಬೇರೆಬೇರೆ ಕಮ್ಮಿದರವನ್ನು ನಮೂದಿಸತಕ್ಕದ್ದು.

5. ಡೆಪ್ಯೂಟಿ ಕಮ್ಮಿಷನರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವೆ ಸ್ವಾತಂತ್ರ್ಯವನ್ನು ತಮ್ಮಲ್ಲಿಡೇ ಉಳಿಸಿಕೊಂಡಿರುತ್ತಾರೆ; ಮತ್ತು ಹಾಂಗೆ ತಿರಸ್ಕರಿಸುವ ಬಗ್ಯೆ ಅವರು ಯಾವ ಕಾರಣವೂ ತಿಳಿಸಬೇಕಾದ್ದಿಲ್ಲವು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ಎಂದುವಾರದವಳಗಾಗಿ ತಕ್ಕ ಥಾವಾಕಾಗದದಲ್ಲಿ ಕಂಟ್ರಾಕ್ಟು ಮುಚ್ಚಲಿಕೆಯನ್ನು ಬರೆದು ಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕ್ರಮವಾಗಿ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದ್ ಮಾಡಲ್ಪಟ್ಟ ದರಖಾಸ್ತುಗಳು ಇದರಡೀ ರುಜು ಮಾಡಿರುವವರಿಂದ 1887ನೇ ಇಸವಿ ಮಾರ್ಚೀ 31ನೇ ತಾರೀಖು ವರಿಗೆ ತೆಗದುಕೊಳ್ಳಲ್ಪಡುವದು.

9. ದರಖಾಸ್ತುದಾರರು, ಬಂದು ಯಾ ಹೆಚ್ಚು ತಾಲ್ಲೂಕುಗಳಿಗೋಸ್ಕರವಾಗಲೀ ವಟ್ಟು ಡಿಸ್ಟ್ರಿಕ್ಟು ಗೋಸ್ಕರವಾಗಲೀ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

10. ಕಂಟ್ರಾಕ್ಟಿನ ಷರತ್ತುಗಳು ಕುರಿತ ಯಾ ಇತರ ವಿಷಯಿಕವಾದ ವಿಶೇಷ ತಿಳಿವಳಿಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟು ಪ್ರೊಪೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಪೇಷನರ್, ಹಾಸನ ರೇಂಜ್.

ಖಾಸಗಿ ಪ್ರಕಟನೆ.

ತಾರೀಖು 10ನೇ ಮಾರ್ಚೀ 1887.

ಇದರಿಂದ ಸಮಸ್ತರಿಗೂ ತಿಳಿಸುವದೇನಂದರೆ,—ಕಡೂರು ಡಿಸ್ಟ್ರಿಕ್ಟು ಕೊಪ್ಪದ ತಾಲ್ಲೂಕು, ಕೊಪ್ಪದ ಹಾಲಿಗಾರ್ರು ವೆಂಕಟಸುಬ್ಬಯ್ಯನವರ ಕುಟುಂಬ ತಿಂಮಮ್ಮನು, 1885ನೇ ಇಸವಿ ಜನವರೀ ತಾರೀಖು 9ರಲ್ಲು ತನ್ನ ಕಾರಖಾತಿ ವ್ಯೆವಟ್ಟು ನೋಡತಕ್ಕ ಬಗ್ಗೆ ಹರಾವರಿ ಸಂಣಸುಬ್ಬಯ್ಯ ಹಾ| ವೆಂಕಟಗಿರಿಯಪ್ಪ ಯಿವರಿಬ್ಬರಿಗೆ ಬರಕೊಟ್ಟು ಸರ್ವ ಮೊಖ್ತ್ಯಾರಿ ಪ್ರಕಾರ ಸರಿಯಾಗಿ ಕೆಲಸ ನಡಿಯದೇಲೂ, ಈಚಿಗೆ ನನಗೂ ನನ್ನ ಭಾವ ವಿಶ್ವೇಶ್ವರಯ್ಯನವರ ಕುಟುಂಬ ಲಕ್ಷ್ಮಮ್ಮನಿಗೂ ವಿವಾದ ತೀರಲಾರದವಾಗಿ ಹಿಸ್ಸೇಪಾರೀಖತ್ತು ಆಗಿ ಆ ಪಾರೀಖತ್ತು ರಿಜಿಸ್ಟ್ರಿ ಆದನಂತರದಲ್ಲಿ ನನ್ನ ಹಿಸ್ಸೆ ಪೂರ್ತಿಕೆಲಸ ನಡಿಸುವದಕ್ಕೆ ವಟ್ಟು ಮೊಖ್ತ್ಯಾರಿಯನ್ನು ನನ್ನ ಭಾವ ಹಾಲಿಗಾರ ವೆಂಕಟಸುಬ್ಬಯ್ಯನಿಗೆ ಕೊಟ್ಟು ಈ ಮೊಖ್ತ್ಯಾರಿಯನ್ನ ಅನುಸರಿಸಿ ಯರಡುವರುಷದ ಲಾಗಾಯತು ವೆಂಕಟಸುಬ್ಬಯ್ಯನ ಮಾರೀಫತ್ತು ಲೇಣಿದೇಣಿಗಳು ನಡಿಯುತ್ತಾ ಬರುವದ್ದರಿಂದ ಮೊದಲು ಸಂಣಸುಬ್ಬಯ್ಯ, ವೆಂಕಟಗಿರಿಯಪ್ಪ ಯಿವರುಗಳ ಹೆಸರಿಗೆ 1885ನೇ ಇಸವಿ ಜನವರೀ ತಾರೀಖು 29ರಲ್ಲಿ ಬರಸಿಕೊಟ್ಟ ಮೊಖ್ತ್ಯಾರಿಯನ್ನು ಇದರಿಂದ ರದ್ದುಮಾಡಿ ಯಿದೆ ಯಾವ ವಿಧವಾಗಿಯೇ ಆಗಲಿ ನನ್ನ ಕಾರಖಾನೆಗೆ ಅವರುಗಳು ಪ್ರವೇಶ ಮಾಡಕೂಡದು.

ತಿಂಮಮ್ಮನ ಪಕ್ಕದ ರುಜುವಿಗೆ ವೆಂಕಟಸುಬ್ಬಯ್ಯನ ಬರಹಾ.

ಮೈಸೂರು ಗೋಲ್ಡ್ ಫೀಲ್ಡ್ಸ್ ಕಂಪೆನಿ ಲಿಮಿಟೆಡ್.

ಕೋಲಾರ್ ರೋಡ್ ಸ್ಟೇಷನ್.

ಲೋಹಾರ್ ಮತ್ತು ಬಡಾಯಿ ಕೆಲಸದವರು.

ಮೈಸೂರು ಗೋಲ್ಡ್ ಫೀಲ್ಡ್ಸ್‌ಯಾನೆ ಬಂಗಾರದ ಗನಿ ಕೆಲಸದ ಕಂಪೆನಿಯವರಿಗೆ, ಇಂಗ್ಲೀಷ್ ತಿಳಿದಂಥಾ ಬಡಾಯಿ ಕೆಲಸದಬುದ್ಧಿವಂತನಾದ ಪಬ್ಬ ಮೇಸ್ತ್ರಿ ಮತ್ತು ಲೋಹಾರ್ ಇಸಂ ಸುದಾ ಜೇಕಾಗಿ ಯಿರುತ್ತೆ.

ಕೋಲಾರ್ ರೋಡ್ ಸ್ಟೇಷನಿನಲ್ಲಿಯ ಸದರೀ ಮೇಲಿಕಂಡ ಕಂಪೆನಿ ಸೂಪರ್‌ಟೆಂಡೆಂಟರವರಿಗೆ ಸಂಬಳ ನಮೂದಿನಿಂದ ಬರೆದುಕೊಳ್ಳತಕ್ಕದ್ದು.